**All India Radio: Bangalore**
**National Bulletin In Kannada**
**18.01.2026  1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**18.01.2026  1.10 p.m.**

**<><><><>**

ಮುಖ್ಯಾಂಶಗಳು

1. ಅಸ್ಸಾಂನ ಕಾಜಿರಂಗ ಎಲಿವೇಡೆಟ್ ಕಾರಿಡಾರ್‌ಗೆ ಭೂಮಿ ಪೂಜೆ ನೆರವೇರಿಸಿದ ಪ್ರಧಾನಿ; ಐದು ವಂದೇ ಭಾರತ್ ರೈಲುಗಳಿಗೂ ಹಸಿರು ನಿಶಾನೆ
2. ನವದೆಹಲಿಯಲ್ಲಿಂದು ಪಿಎಂ ವಿಶ್ವಕರ್ಮ ಹಾತ್ ೨೦೨೬ ಕ್ಕೆ ಕೇಂದ್ರ ಸಚಿವ ಜಿತನ್ ರಾಮ್ ಮಾಂಯ್ಝಿ ಚಾಲನೆ
3. ದೇಶದಾದ್ಯಂತ ಇಂದು ಮೌನಿ ಅಮಾವಾಸ್ಯೆ; ಸಂಗಮ ಸ್ಥಳಗಳಲ್ಲಿ ಭಕ್ತರಿಂದ  ಪವಿತ್ರ ಮಾಘ ಸ್ನಾನ
4. ಏಕದಿನ ಕ್ರಿಕೆಟ್; ಇಂದೋರ್‌ನಲ್ಲಿಂದು ಕೊನೆಯ ಪಂದ್ಯದಲ್ಲಿ ಭಾರತ-ನ್ಯೂಜಿಲೆಂಡ್ ಹಣಾಹಣಿ

<><><><>

ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಿಂದ ಐದು ಹೊಸ ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಪ್ರಧಾನಿ ನರೇಂದ್ರ ಮೋದಿ ಇಂದು ಚಾಲನೆ ನೀಡಿದ್ದಾರೆ. ಪಶ್ಚಿಮ ಬಂಗಾಳದ ಹೂಗ್ಲಿಯಿಂದ ಮೂರು, ಅಸ್ಸಾಂನ ನಾಗಾಂವ್ ಜಿಲ್ಲೆಯ ಕಲಿಯಾಬೋರ್‌ನಲ್ಲಿ ಎರಡು ಹೊಸ ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಪ್ರಧಾನಿ ಹಸಿರು ನಿಶಾನೆ ತೋರಿದ್ದಾರೆ. ಹೊಸ ರೈಲು ಸೇವೆಗಳು ಈಶಾನ್ಯ ಮತ್ತು ಉತ್ತರ ಭಾರತದ ನಡುವಿನ ರೈಲು ಸಂಪರ್ಕವನ್ನು ಬಲಪಡಿಸಲಿದೆ. ಜನರಿಗೆ ಸುರಕ್ಷಿತ ಮತ್ತು ಹೆಚ್ಚು ಅನುಕೂಲಕರ ಪ್ರಯಾಣವನ್ನು ಸಕ್ರಿಯಗೊಳಿಸಲಿದೆ. ಅಸ್ಸಾಂನ ನಾಗಾಂವ್ ಜಿಲ್ಲೆಯ ಕಲಿಯಾಬೋರ್‌ನಲ್ಲಿ ಆರು ಸಾವಿರದ ೯೫೦ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ಕಾಜಿರಂಗ ಎಲಿವೇಟೆರ್ ಕಾರಿಡಾರ್ ಯೋಜನೆಗಾಗಿ ಪ್ರಧಾನಿ ಭೂಮಿಪೂಜೆ ನೆರವೇರಿಸಿದ್ದಾರೆ. ೮೬ ಕಿಲೋಮೀಟರ್ ಉದ್ದದ ಕಾಜಿರಂಗ ಎಲಿವೇಟೆಡ್ ಕಾರಿಡಾರ್ ಯೋಜನೆಯು ಪರಿಸರ ಪ್ರಜ್ಞೆಯ ರಾಷ್ಟ್ರೀಯ ಹೆದ್ದಾರಿ ಯೋಜನೆಯಾಗಿದೆ. ಉದ್ಯಾನವನದ

ಶ್ರೀಮಂತ ಜೀವವೈವಿಧ್ಯತೆಯ ರಕ್ಷಣೆಯನ್ನು ಖಚಿತಪಡಿಸಿಕೊಳ್ಳುವ ಮೂಲಕ ಪ್ರಾದೇಶಿಕ ಸಂಪರ್ಕವನ್ನು ಸುಧಾರಿಸುವ ಗುರಿಯನ್ನು ಈ ಯೋಜನೆ ಹೊಂದಿದೆ.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ**

ಸಂಜೆ, ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯ ಸಿಂಗೂರಿನಲ್ಲಿ ಸುಮಾರು ೮೩೦ ಕೋಟಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ಮೋದಿ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

<><><><>

ಕೇಂದ್ರ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವ ಜಿತನ್ ರಾಮ್ ಮಾಂಝಿ, ನವದೆಹಲಿಯಲ್ಲಿಂದು ಪ್ರಧಾನ ಮಂತ್ರಿ ವಿಶ್ವಕರ್ಮ ಹಾತ್ ೨೦೨೬ ಅನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಚಿವರು, ಕುಶಲಕರ್ಮಿಗಳು ಮತ್ತು ಇತರ ಪ್ರದರ್ಶಕರೊಂದಿಗೆ ಸಂವಾದ ನಡೆಸಿದರು. ಉದ್ಘಾಟನಾ ಸಮಾರಂಭದಲ್ಲಿ ಕೇಂದ್ರ ಎಮ್‌ಎಸ್‌ಎಮ್‌ಇ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮತ್ತು ಇತರ ಅಧಿಕಾರಿಗಳು ಭಾಗವಹಿಸಿದ್ದರು. ಈ ಪ್ರದರ್ಶನವು, ಕುಶಲಕರ್ಮಿಗಳು ತಮ್ಮ ಕರಕುಶಲ ಉತ್ಪನ್ನಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಖರೀದಿದಾರರು, ಪಾಲುದಾರರು ಮತ್ತು ಸಾರ್ವಜನಿಕರಿಗೆ ಪ್ರದರ್ಶಿಸಲು ಮತ್ತು ಮಾರಾಟ ಮಾಡಲು ಪ್ರಮುಖ ವೇದಿಕೆ ಒದಗಿಸುವ ಗುರಿ ಹೊಂದಿದೆ. ದೇಶಾದ್ಯಂತ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ೧೦೦ ಕ್ಕೂ ಹೆಚ್ಚು ಕುಶಲಕರ್ಮಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಇದು ವೈವಿಧ್ಯಮಯ ಸಾಂಪ್ರದಾಯಿಕ ಕೌಶಲ್ಯ ಮತ್ತು ಕರಕುಶಲ ವಸ್ತುಗಳ ಅಖಿಲ ಭಾರತ ಮಟ್ಟದ ಪ್ರಾತಿನಿಧ್ಯವಾಗಿದೆ.

ಈ ಕಾರ್ಯಕ್ರಮವು ಇದೇ ೩೧ ರಂದು ಮುಕ್ತಾಯಗೊಳ್ಳಲಿದ್ದು, ಬೆಳಿಗ್ಗೆ ೧೦:೩೦ ರಿಂದ ರಾತ್ರಿ ೧೦ ಗಂಟೆಯವರೆಗೆ ಸಾರ್ವಜನಿಕರಿಗೆ ಮುಕ್ತವಾಗಿರಲಿದೆ.

<><><><>

ಭಾರತೀಯ ಕರಾವಳಿ ಕಾವಲು ಪಡೆ- ಐಸಿಜಿ ಮತ್ತು ಜಪಾನ್ ಕರಾವಳಿ ಕಾವಲು ಪಡೆ-ಜೆಸಿಜಿ, ಮುಂಬೈನಲ್ಲಿ ಜಂಟಿ ಕವಾಯತು ನಡೆಸಿವೆ. ಈ ಮೂಲಕ ತಮ್ಮ ಕಡಲ ಪಾಲುದಾರಿಕೆ ಮತ್ತು ಮುಕ್ತ ಇಂಡೋ-ಪೆಸಿಫಿಕ್ ಭಾಗದೆಡೆಗಿನ ಬದ್ಧತೆಯನ್ನು ಪುನರುಚ್ಚರಿಸಿವೆ. ಈ ಒಪ್ಪಂದದ ಭಾಗವಾಗಿ, ಜಪಾನ್ ಕರಾವಳಿ ಕಾವಲು ಪಡೆ ಕಮಾಂಡೆಂಟ್ ಅಡ್ಮಿರಲ್ ಯೋಶಿಯೊ ಸೆಗುಚಿ,

ಉನ್ನತ ಮಟ್ಟದ ನಿಯೋಗದೊಂದಿಗೆ ನಿನ್ನೆ ಭಾರತೀಯ ಕರಾವಳಿ ಕಾವಲು ಪಡೆಯ ಪ್ರಾದೇಶಿಕ ಪ್ರಧಾನ ಕಚೇರಿಗೆ ಭೇಟಿ ನೀಡಿದರು. ಅಡ್ಮಿರಲ್ ಸೆಗುಚಿ ಅವರು, ಕರಾವಳಿ ಕಾವಲು ಪಶ್ಚಿಮ ಪ್ರದೇಶ ಕಮಾಂಡರ್ ಇನ್ಸ್‌ಪೆಕ್ಟರ್ ಜನರಲ್ ಭೀಷಮ್ ಶರ್ಮಾ ಅವರೊಂದಿಗೆ ಸೌಜನ್ಯ ಸಭೆ ನಡೆಸಿ, ಉಭಯ ದೇಶಗಳ ಬಲವರ್ಧಿತ ಸಹಕಾರ ಮತ್ತು ಪರಸ್ಪರ ಕಾರ್ಯಸಾಧ್ಯತೆಯ ಮಹತ್ವವನ್ನು ಒತ್ತಿ ಹೇಳಿದರು.

<><><>

ಕಳೆದ ವರ್ಷದ ಡಿಸೆಂಬರ್ ಆರಂಭದಲ್ಲಿ ಇಂಡಿಗೋ ವಿಮಾನಯಾನ ಸಂಸ್ಥೆಯ ಭಾರಿ ಪ್ರಮಾಣದ ವಿಳಂಬ ಮತ್ತು ರದ್ದತಿಗಳನ್ನು ಅನುಸರಿಸಿ, ನಾಗರಿಕ ವಿಮಾನಯಾನ ನಿರ್ದೇಶನಾಲಯ-ಡಿಜಿಸಿಎ, ೨೨ ಕೋಟಿ ೨೦ ಲಕ್ಷ ರೂಪಾಯಿ ದಂಡ ವಿಧಿಸಿದೆ. ಡಿಸೆಂಬರ್ ೩ ಮತ್ತು ೫ ರ ಅವಧಿಯಲ್ಲಿ, ೨ ಸಾವಿರದ ೫೦೭ ವಿಮಾನಗಳ ರದ್ದತಿ ಮತ್ತು ೧ ಸಾವಿರದ ೮೫೨ ವಿಮಾನಗಳ ವಿಳಂಬವು ವಿವಿಧ ವಿಮಾನ ನಿಲ್ದಾಣಗಳಲ್ಲಿ ಸಿಲುಕಿರುವ ಮೂರು ಲಕ್ಷಕ್ಕೂ ಹೆಚ್ಚು ಪ್ರಯಾಣಿಕರಿಗೆ ಅನಾನುಕೂಲತೆಯನ್ನು ಉಂಟುಮಾಡಿದೆ. ಇಂಡಿಗೋ ಕಾರ್ಯಾಚರಣೆಯ ಅಡಚಣೆಗಳಿಗೆ ಕಾರಣವಾದ ಸಂದರ್ಭಗಳ ಸಮಗ್ರ ಪರಿಶೀಲನೆ ಮತ್ತು ಮೌಲ್ಯಮಾಪನವನ್ನು ಕೈಗೊಳ್ಳಲು ಡಿಜಿಸಿಎ ರಚಿಸಿದ್ದ ನಾಲ್ವರು ಸದಸ್ಯರ ಸಮಿತಿಯು ನಡೆಸಿದ ವಿವರವಾದ ವಿಚಾರಣೆಯ ನಂತರ ದಂಡ ವಿಧಿಸಲಾಗಿದೆ.

<><><>

ದೇಶದಾದ್ಯಂತ ಇಂದು ಮೌನಿ ಅಮಾವಾಸ್ಯೆ ಪ್ರಯುಕ್ತ ಸಂಗಮ ಸ್ಥಳಗಳಲ್ಲಿ ಶ್ರದ್ಧಾಳುಗಳು ಬೆಳಗ್ಗಿನಿಂದಲೇ ಪವಿತ್ರ ಸ್ನಾನ ಮಾಡಿ ಪೂಜಾ ಕೈಂಕರ್ಯಗಳಲ್ಲಿ ನಿರತರಾಗಿದ್ದಾರೆ. ಉತ್ತರ ಪ್ರದೇಶದಲ್ಲಿ, ಮೌನಿ ಅಮಾವಾಸ್ಯೆಯಂದು ಲಕ್ಷಾಂತರ ಭಕ್ತರು ನದಿಗಳಲ್ಲಿ ಪವಿತ್ರ ಸ್ನಾನ ಮಾಡುತ್ತಿದ್ದಾರೆ. ಪ್ರಯಾಗ್‌ರಾಜ್‌ನ ಸಂಗಮದಲ್ಲಿ ನಡೆಯುವ ಮಾಘ ಮೇಳದ ವಾರ್ಷಿಕ ಧಾರ್ಮಿಕ ಕಾರ್ಯಕ್ರಮದ ಮೂರನೇ ಪ್ರಮುಖ ಸ್ನಾನ ಇದಾಗಿದೆ. ಮೌನಿ ಅಮಾವಾಸ್ಯೆಯಂದು ಪವಿತ್ರ ಸ್ನಾನ ಮಾಡಲು ಭಕ್ತರು ಬೆಳಗಿನ ಜಾವದಿಂದಲೇ ಪ್ರಯಾಗ್‌ರಾಜ್‌ನಲ್ಲಿ - ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳ ಸಂಗಮದಲ್ಲಿ ನೆರೆದಿದ್ದಾರೆ. ಕಿನ್ನರ್ ಅಖಾಡ ಸೇರಿದಂತೆ ಅನೇಕ ಅಖಾಡಗಳ ಸಂತರು ಮತ್ತು ಋಷಿಗಳು ಸಹ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದರು.

ಈ ಬಾರಿ, ಆಡಳಿತ ಮಂಡಳಿಯು, ೩ ಕಿಲೋಮೀಟರ್‌ಗಿಂತ ಹೆಚ್ಚು ಉದ್ದದ ಘಾಟ್‌ಗಳನ್ನು ಸಿದ್ಧಪಡಿಸಿದೆ. ನಿನ್ನೆ ಸಂಗಮದಲ್ಲಿ ಒಂದು ಕೋಟಿ ೫೦ ಲಕ್ಷ ಜನರು ಪವಿತ್ರ ಸ್ನಾನ ಮಾಡಿದ್ದಾರೆ.

<><><><>

ಭಾರತದ ವಿದ್ಯುತ್ ವಿತರಣಾ ಸೌಲಭ್ಯಗಳು ೨೦೨೪-೨೫ರಲ್ಲಿ ೨ ಸಾವಿರದ ೭೦೧ ಕೋಟಿ ರೂಪಾಯಿಗಳ ತೆರಿಗೆ ನಂತರದ ಲಾಭ- ಪಿಎಟಿ ಯನ್ನು ದಾಖಲಿಸಿವೆ. ವಿದ್ಯುತ್ ಸಚಿವಾಲಯದ ಪ್ರಕಾರ, ರಾಜ್ಯ ವಿದ್ಯುತ್ ಮಂಡಳಿಗಳನ್ನು ಬೇರ್ಪಡಿಸಿ ಕಾರ್ಪೊರೇಟೀಕರಣಗೊಳಿಸಿದ ನಂತರ ಒಟ್ಟಾರೆಯಾಗಿ ವಿತರಣಾ ಸೌಲಭ್ಯಗಳು, ಕಳೆದ ಹಲವು ವರ್ಷಗಳಿಂದ ಪಿಎಟಿ ನಷ್ಟವನ್ನು ವರದಿ ಮಾಡುತ್ತಿವೆ. ೨೦೧೩-೧೪ರಲ್ಲಿ ೬೭ ಸಾವಿರದ ೯೬೨ ಕೋಟಿ ರೂಪಾಯಿಗಳ ನಷ್ಟಕ್ಕೆ ಹೋಲಿಸಿದರೆ ೨೦೨೪-೨೫ರಲ್ಲಿನ ಈ ಸಕಾರಾತ್ಮಕ ಪಿಎಟಿ ಗಮನಾರ್ಹ ಸುಧಾರಣೆಯಾಗಿದೆ. ಈ ಕುರಿತು ಪ್ರತಿಕ್ರಿಯಿಸಿದ ಕೇಂದ್ರ ವಿದ್ಯುತ್ ಸಚಿವ ಮನೋಹರ್ ಲಾಲ್, ಇದು ವಿತರಣಾ ವಲಯಕ್ಕೆ ಹೊಸ ಅಧ್ಯಾಯವನ್ನು ಸೂಚಿಸುತ್ತದೆ ಹಾಗೂ ವಿತರಣಾ ವಲಯದ ಕಳವಳಗಳನ್ನು ಪರಿಹರಿಸಲು ತೆಗೆದುಕೊಂಡ ಹಲವು ಕ್ರಮಗಳ ಪರಿಣಾಮವಾಗಿದೆ ಎಂದು ತಿಳಿಸಿದರು.

<><><><>

ಪಂಜಾಬ್‌ನಲ್ಲಿರುವ ಗಡಿ ಭದ್ರತಾ ಬೇಲಿಯನ್ನು ಅಂತಾರಾಷ್ಟ್ರೀಯ ಗಡಿಯ ಸಮೀಪಕ್ಕೆ ಸ್ಥಳಾಂತರಿಸಲು ಕೇಂದ್ರ ಸರ್ಕಾರ ತಾತ್ವಿಕವಾಗಿ ಒಪ್ಪಿಗೆ ಸೂಚಿಸಿದೆ. ಈ ಕ್ರಮವು ಪ್ರಸ್ತುತ ಗಡಿ ಬೇಲಿಯಿಂದ ಆಚೆಗೆ ಉಳಿದುಕೊಂಡಿರುವ ಸಾವಿರಾರು ಎಕರೆ ಕೃಷಿಭೂಮಿಯಲ್ಲಿನ ಕಾರ್ಯಚಟುವಟಿಕೆಗಳಿಗೆ ದಾರಿ ಮಾಡಿಕೊಡುತ್ತದೆ. ಈ ಮೂಲಕ ಪಂಜಾಬ್‌ನ ಗಡಿ ಪ್ರದೇಶದ ರೈತರಿಗೆ ಇದು ಪ್ರಮುಖ ಪರಿಹಾರವನ್ನು ಒದಗಿಸುತ್ತದೆ. ಪಂಜಾಬ್ ರಾಜ್ಯವು ಪಾಕಿಸ್ತಾನದೊಂದಿಗೆ ೫೩೨ ಕಿಲೋಮೀಟರ್ ಉದ್ದದ ಗಡಿಯನ್ನು ಹಂಚಿಕೊಂಡಿದೆ. ಪ್ರಸ್ತುತ, ಗಡಿಯಲ್ಲಿ ಸಾವಿರಾರು ಎಕರೆ ಭೂಮಿಯನ್ನು ಉಳುಮೆ ಮಾಡುತ್ತಿರುವ ನೂರಾರು ರೈತರು ಭದ್ರತಾ ಕಾರಣಗಳಿಗಾಗಿ ಗಡಿ ಭದ್ರತಾ ಪಡೆಯ ಕಟ್ಟುನಿಟ್ಟಿನ ಮೇಲ್ವಿಚಾರಣೆಯಲ್ಲಿ ಸೀಮಿತ ಅವಧಿಗೆ ಬೇಲಿಯನ್ನು ದಾಟಬೇಕಾಗಿದೆ.

<><><><>

ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ೩೬ ವರ್ಷಗಳ ಆಡಳಿತವನ್ನು ಕೊನೆಗೊಳಿಸಬೇಕೆಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕರೆ ನೀಡಿದ್ದಾರೆ.

ಇಸ್ಲಾಮಿಕ್ ಗಣರಾಜ್ಯದ ವಿರುದ್ಧ ವಾರಗಟ್ಟಲೆ ನಡೆದ ಪ್ರತಿಭಟನೆಗಳ ನಂತರ, ಇರಾನ್‌ನಲ್ಲಿ ಹೊಸ ನಾಯಕತ್ವವನ್ನು ಹುಡುಕುವ ಸಮಯ ಬಂದಿದೆ ಎಂದು ಟ್ರಂಪ್ ಅಮೆರಿಕದ ಸುದ್ದಿವಾಹಿನಿಗೆ ತಿಳಿಸಿದ್ದಾರೆ. ಇರಾನ್‌ನ ನಾಯಕತ್ವವು ದೇಶವನ್ನು ನಡೆಸಲು ದಬ್ಬಾಳಿಕೆ ಮತ್ತು ಹಿಂಸಾಚಾರವನ್ನು ಅವಲಂಬಿಸಿದೆ. ದೇಶದ ಸಂಪೂರ್ಣ ನಾಶಕ್ಕೆ ಮತ್ತು ಅಭೂತಪೂರ್ವ ಮಟ್ಟದ ಹಿಂಸಾಚಾರವನ್ನು ಬಳಸಿದ್ದಕ್ಕೆ ಖಮೇನಿ ವಿರುದ್ಧ ಟ್ರಂಪ್ ಕಿಡಿಕಾರಿದ್ದಾರೆ.

<><><>

ನೆದರ್‌ಲ್ಯಾಂಡ್ಸ್‌ನಲ್ಲಿ ನಡೆಯಲಿರುವ ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್‌ನಲ್ಲಿ ವಿಶ್ವ ಚಾಂಪಿಯನ್, ಭಾರತದ ಡಿ ಗುಕೇಶ್ ಅವರು ಉಜ್ಬೇಕಿಸ್ತಾನ್‌ನ ಜಾವೋಖಿರ್ ಸಿಂದರೋವ್ ವಿರುದ್ಧ ಇಂದು ತಮ್ಮ ಅಭಿಯಾನವನ್ನು ಪ್ರಾರಂಭಿಸಲಿದ್ದಾರೆ. ೨೦೨೪ ರಲ್ಲಿ ಚೀನಾದ ಡಿಂಗ್ ಲಿರೆನ್ ಅವರನ್ನು ಸೋಲಿಸುವ ಮೂಲಕ ಗುಕೇಶ್ ವಿಶ್ವ ಪ್ರಶಸ್ತಿಯನ್ನು ಗೆದ್ದಿದ್ದರು.

<><><>

ಇಂದೋರ್‌ನ ಹೋಳ್ಕರ್ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿಯ ಕೊನೆಯ ಪಂದ್ಯದಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ತಂಡಗಳು ಸೆಣಸಲಿವೆ. ಪಂದ್ಯ ಮಧ್ಯಾಹ್ನ ೧.೩೦ ಕ್ಕೆ ಆರಂಭವಾಗಲಿದೆ. ಮೂರು ಪಂದ್ಯಗಳ ಸರಣಿಯು ೧-೧ ರಲ್ಲಿ ಸಮಬಲಗೊಂಡಿದ್ದು, ಉಭಯ ತಂಡಗಳಿಗೆ ಸರಣಿ ಗೆಲ್ಲಲು ಈ ಪಂದ್ಯ ಪ್ರಮುಖವಾಗಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>